# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 262 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 06-12-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ರಸ್ತೆ ಬದಿಯಲ್ಲಿ ಬಿಡಬೇಕಾದ ಸುರಕ್ಷಿತ ಜಾಗದ (ರೋಡ್ ಮಾರ್ಜಿನ್) ಕುರಿತ ನಿಯಮಗಳೇನು ಮತ್ತು ಅದನ್ನು ಗುರುತಿಸಲು ಅನುಸರಿಸುತ್ತಿರುವ ಕಾರ್ಯವಿಧಾನಗಳೇನು; (ವಿವರ ನೀಡುವುದು) | ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಮಧ್ಯಭಾಗದಿಂದ ಕಟ್ಟಡ ರೇಖೆ ಪರಿಮಿತಿಯನ್ನು ಸರ್ಕಾರದ ಸುತ್ತೋಲೆ ಸಂಖ್ಯೆ:ಲೋಇ 466 ಸಿಆರ್ಎಂ 2022, ದಿನಾಂಕ:30-06-2022 ರಲ್ಲಿ ತಿಳಿಸಿರುವಂತೆ ನಿಗಧಿಗೊಳಿಸಲಾಗಿರುತ್ತದೆ. ಅದರಂತೆ ಕಟ್ಟಡ ನಿರ್ಮಾಣಕ್ಕೆ ನಿಯಮಗಳನ್ನು ಪಾಲಿಸಲಾಗುತ್ತಿದೆ.<br><br>ರಾಷ್ಟ್ರೀಯ ಹೆದ್ದಾರಿಗೆ ಸಂಬಂಧಿಸಿದಂತೆ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದ ಪತ್ರ ಸಂ: NH.111/P/72/76 ದಿನಾಂಕ:13.01.1977 ರಲ್ಲಿ ಗ್ರಾಮಾಂತರ ಪ್ರದೇಶಗಳ ಮೂಲಕ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳ ಮಧ್ಯ ಭಾಗದಿಂದ ಕನಿಷ್ಟ 40 ಮೀ ಹಾಗೂ ಪಟ್ಟಣ/ನಗರ ಪ್ರದೇಶಗಳ ಮೂಲಕ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳ ಗಡಿರೇಖೆಯಿಂದ ಕನಿಷ್ಟ 3-6 ಮೀ ಅಂತರದಲ್ಲಿ ಯಾವುದೇ ಶಾಶ್ವತ ನಿರ್ಮಾಣ ಕಾರ್ಯ ಕೈಗೊಳ್ಳಬಾರದೆಂದು ಸೂಚಿಸಲಾಗಿರುತ್ತದೆ. |
| ಆ) | ಈ ಕುರಿತಂತೆ ದಿನಾಂಕ: 30.06.2022ರ ಲೋಕೋಪಯೋಗಿ ಇಲಾಖೆಯ ಸುತ್ತೋಲೆ ಸಂಖ್ಯೆ ಲೋ.ಇ. 466 ಸಿ.ಆರ್ಎಂ 2022 (ಇ) ಯನ್ನು ಪಾಲಿಸಲಾಗುತ್ತಿದೆಯೇ; (ವಿವರ ನೀಡುವುದು) | ಸರ್ಕಾರದ ಸುತ್ತೋಲೆ ಸಂಖ್ಯೆ ಲೋ.ಇ. 466 ಸಿಆರ್ಎಂ 2022 (ಇ) ದಿನಾಂಕ:30.06.2022 ಅನ್ನು ಪಾಲಿಸಲಾಗುತ್ತಿದೆ. |
| ಇ) | ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದ ಪತ್ರ ಸಂಖ್ಯೆ:ಎನ್ಎಚ್111/ಪಿ072/76 ದಿನಾಂಕ:13.01.1977 ರಂತೆ ಹೆದ್ದಾರಿಗಳ ಮಧ್ಯ ಭಾಗದಿಂದ ಸಾಮಾನ್ಯವಾಗಿ 40 ಮೀಟರ್ ಮತ್ತು ಪಟ್ಟಣ / ನಗರ ಪ್ರದೇಶಗಳಲ್ಲಿ ಕನಿಷ್ಠ 3-6 ಅಂತರದಲ್ಲಿ ಯಾವುದೇ ಕಟ್ಟಡ ನಿರ್ಮಾಣ ಮಾಡಬಾರದಾಗಿ ಸೂಚಿಸಲಾಗಿದ್ದು. ಅದನ್ನು ರಾಜ್ಯದಲ್ಲಿ ಪಾಲಿಸಲಾಗಿದೆಯೇ; (ರಾಷ್ಟೀಯ ಹೆದ್ದಾರಿವಾರು ವಿವರ ನೀಡುವುದು) | ರಾಷ್ಟ್ರೀಯ/ರಾಜ್ಯ ಹೆದ್ದಾರಿಗಳ ಮಧ್ಯ ಭಾಗದಿಂದ 40 ಮೀಟರ್ ಮತ್ತು ಪಟ್ಟಣ/ನಗರ ಪ್ರದೇಶಗಳಲ್ಲಿ ದಾಖಲಿತ ರಸ್ತೆಯ ಭೂ ಗಡಿ ಅಂಚಿನಿಂದ ಕನಿಷ್ಠ 3-6 ಮೀಟರ್ ಅಂತರದಲ್ಲಿ ಯಾವುದೇ ಕಟ್ಟಡ ನಿರ್ಮಾಣಕ್ಕೆ ಲೋಕೋಪಯೋಗಿ ಇಲಾಖೆಯಿಂದ ಅನುಮತಿಯನ್ನು ನೀಡಲಾಗುತ್ತಿಲ್ಲ. ಸರ್ಕಾರದ ಆದೇಶ/ ಸುತ್ತೋಲೆಯಲ್ಲಿನ ಅಂಶಗಳನ್ನು ಪಾಲಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br><br>ರಾಷ್ಟ್ರೀಯ ಹೆದ್ದಾರಿವಾರು ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ. |

<table>
<tr>
<td>ಈ)</td>
<td>ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಾಜ್ಯ ಹೆದ್ದಾರಿಗಳ, ಎಂ.ಡಿ.ಆರ್ ಮತ್ತು ಇತರ ಯೋಜನೆಯ ರಸ್ತೆಗಳ ಇಕ್ಕೆಲಗಳಲ್ಲಿ ಕಟ್ಟಡ ನಿಯಂತ್ರಣ ರೇಖೆ / ರಸ್ತೆ ಭೂ ಗಡಿ ಗುರುತಿಸಲು ಲ್ಯಾಂಡ್ ಪ್ಲಾನ್ ಸರ್ವೆ ಕೈಗೊಂಡು ರಸ್ತೆಗಳ ಭೂ ಗಡಿ ದಾಖಲೀಕರಣ ಮಾಡಲು ಕ್ರಮ ಕೈಗೊಂಡಿದೆಯೇ; ಕ್ರಮವಹಿಸಿದ್ದಲ್ಲಿ ವಿವರ ನೀಡುವುದು; ಕ್ರಮವಹಿಸಿರದಿದ್ದಲ್ಲಿ ಕಾರಣಗಳೇನು; ಈ ಕಾರ್ಯ ಯಾವಾಗ ಪೂರ್ಣಗೊಳಿಸಲಾಗುವುದು;</td>
<td>ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗಳಿಗೆ ವಿವರವಾದ ಯೋಜನಾ ವರದಿಯನ್ನು ತಯಾರಿಸುವಾಗ ರಸ್ತೆಯ ಭೂಗಡಿಯನ್ನು ಗುರುತಿಸಲಾಗುತ್ತಿದೆ.<br><br>ಪ್ರಸ್ತುತ ಲೋಕೋಪಯೋಗಿ ಇಲಾಖೆ ರಸ್ತೆಗಳ ಭೂ ಗಡಿ ಗುರುತಿಸಲು ಲ್ಯಾಂಡ್ ಪ್ಲಾನ್ ಸರ್ವೆ ಕೈಗೊಂಡಿದ್ದು, ಪ್ರಗತಿಯಲ್ಲಿರುತ್ತದೆ. ವಿವರ ಈ ಕೆಳಕಂಡಂತಿದೆ:
<table>
<tr><th>ವಲಯದ ಹೆಸರು</th><th>ರಾಜ್ಯ ಹೆದ್ದಾರಿಯ ಒಟ್ಟು ಉದ್ದ (ಕಿಮೀ)</th><th>ಸರ್ವೇ ಮಾಡಲಾಗಿರುವ ಉದ್ದ (ಕಿಮೀ)</th></tr>
<tr><td>ದಕ್ಷಿಣ ವಲಯ</td><td>7755.00</td><td>3708.61</td></tr>
<tr><td>ಉತ್ತರ ವಲಯ</td><td>8239.15</td><td>2708.85</td></tr>
<tr><td>ಈಶಾನ್ಯ ವಲಯ</td><td>7080.23</td><td>2431.90</td></tr>
<tr><td>ಕೇಂದ್ರ ವಲಯ</td><td>3010.07</td><td>1862.94</td></tr>
</table>
ಬಾಕಿ ಉಳಿದ ರಾಜ್ಯ ಹೆದ್ದಾರಿಗಳ ಲ್ಯಾಂಡ್ ಪ್ಲಾನ್ ಸರ್ವೆ ಕಾಮಗಾರಿಗಳಿಗೆ ಗುತ್ತಿಗೆ ಆಹ್ವಾನಿಸಲಾಗಿದೆ.</td>
</tr>
<tr>
<td>ಉ)</td>
<td>ಲೋಕೋಪಯೋಗಿ ಇಲಾಖೆ ಕರ್ನಾಟಕ ರಾಜ್ಯದ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳು, ಜಿಲ್ಲಾ ಮುಖ್ಯ ರಸ್ತೆಗಳು ಮತ್ತಿತರ ರಸ್ತೆಗಳ ಇಕ್ಕೆಲಗಳಲ್ಲಿ ಎಷ್ಟು ಅಂತರದಲ್ಲಿ ಕಟ್ಟಡ ಕಟ್ಟಲು ನಿರಾಕ್ಷೇಪಣಾ ಪತ್ರ ನೀಡುವ ಮಾನದಂಡಗಳೇನು: ಈ ನಿರಾಕ್ಷೇಪಣಾ ಪತ್ರಗಳು 30.06.2022 ರ ಲೋಕೋಪಯೋಗಿ ಇಲಾಖೆಯ ಸುತ್ತೋಲೆಯನ್ನು ಉಲ್ಲಂಘಿಸುತ್ತಿರುವುದು ಹಾಗೂ ನ್ಯಾಯಾಲಯದಲ್ಲಿ ಪ್ರಶ್ನಿಸಲ್ಪಟ್ಟು ರದ್ದುಗೊಳಿಸಿರುವುದನ್ನು ಸರ್ಕಾರ ಗಮನಿಸಿದೆಯೇ (ವಿವರ ನೀಡುವುದು)</td>
<td>ರಾಜ್ಯದಲ್ಲಿನ ರಾಷ್ಟ್ರೀಯ ಹೆದ್ದಾರಿಗಳಿಗೆ ಕೇಂದ್ರ ಭೂ-ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ ನವದೆಹಲಿ ಇವರ ಪತ್ರ ಸಂಖ್ಯೆ:NH.III/P/72/76, ದಿನಾಂಕ: 13.01.1977 ಹಾಗೂ ರಾಜ್ಯ ಸರಕಾರದ ಸುತ್ತೋಲೆ ಸಂಖ್ಯೆ:ಲೋಇ 466 ಸಿಆರ್ಎಂ 2022 (ಇ) ದಿನಾಂಕಃ 30-06-2022 ರಂತೆ ಲೋಕೋಪಯೋಗಿ ಇಲಾಖೆಯ ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳು, ಜಿಲ್ಲಾ ಮುಖ್ಯ ರಸ್ತೆಗಳು, ಮತ್ತಿತರ ರಸ್ತೆಗಳ ಇಕ್ಕೆಲಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ನಿರಾಕ್ಷೇಪಣಾ ಪತ್ರ ನೀಡಲಾಗುತ್ತಿದೆ. ಸುತ್ತೋಲೆಯನ್ನು ಉಲ್ಲಂಘಿಸಿರುವ ಹಾಗೂ ನ್ಯಾಯಾಲಯದಲ್ಲಿ ಪ್ರಶ್ನಿಸಲ್ಪಟ್ಟು ರದ್ದುಗೊಳಿಸಿರುವ ಯಾವುದೇ ಪ್ರಕರಣಗಳು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ದಾಖಲಾಗಿರುವುದಿಲ್ಲ.</td>
</tr>
</table>

ಕಡತ ಸಂಖ್ಯೆ: ಲೋಇ 239 ಸಿಎನ್‌ಹೆಚ್ 2023 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

ಸತೀಶ ಜಾರಕಿಹೊಳಿ
ಲೋಕೋಪಯೋಗಿ ಸಚಿವರು